# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ :- 12/10/2021 ರಂದು ವಾರ್ಡ್-32ರ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿ

**ಸಭೆಗೆ ಹಾಜರಿದ್ದ ಅಧಿಕಾರಿಗಳು :-**

- ಶ್ರೀ. ಜಯರಾಜ್ ಕೆ.ಎಸ್, ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ-32.
- ಶ್ರೀ. ಬಸವರಾಜು, ವಾರ್ಡ್ ಇಂಜಿನೀಯರ್
- ಶ್ರೀ. ಅಕ್ಕಮ್ಮ, ಎಲೆಕ್ಟ್ರಿಕಲ್ ಇಂಜಿನೀಯರ್ ಬೆಸ್ಕಾಮ್
- ಶ್ರೀ. ನಾಗದೇವ, ಪೊಲೀಸ್ ಸಬ್-ಇನ್‌ಸ್ಪೆಕ್ಟರ್ ಡಿ.ಜೆ. ಹಳ್ಳಿ.
- ಶ್ರೀ. ಡಾ. ಸುಜಾತ, ಪ್ರಾಥಮಿಕ ಆರೋಗ್ಯ ಕೇಂದ್ರ
- ಶ್ರೀ. ಮೋತಿಲಾಲ್, ಕಾಮಗಾರಿ ನೀರೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ
- ಶ್ರೀ. ಸಿ.ಎಮ್ ವೆಂಕಟೇಶ್, ತೋಟಗಾರಿಕೆ ನೀರೀಕ್ಷಕರು
- ಶ್ರೀ. ದಯಾನಂದ, ಕಿರಿಯ ಆರೋಗ್ಯ ಪರೀವಿಕ್ಷಕರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯದರ್ಶಿ ವಾರ್ಡ್-32 ರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-32 ರ ವಾರ್ಡ್ ಸಮಿತಿ ಸಭೆಯನ್ನು ಎಲ್. ಆರ್. ಬಂಡೆ ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು. ನೋಡಲ್ ಅಧಿಕಾರಿ ರವರು ವಾರ್ಡ್‌ನ ಸಾರ್ವಜನಿಕರ ಕುಂದು ಕೊರತೆಗಳು ಅಧಿಕಾರಿಗಳ ಜೊತೆಯಲ್ಲಿ ಚರ್ಚಿಸಿದರು ಹಾಗೂ ಕುಡಿಯುವ ನೀರು, ಸಾರ್ವಜನಿಕರ ಪಾದಚಾರಿ ರಸ್ತೆಯಲ್ಲಿ ಅನಧಿಕೃತವಾಗಿ ಇಟ್ಟಿರುವ ಸಾಮಾಗ್ರಿಗಳನ್ನು ತೆರೆವುಗೊಳಿಸಲು, ರಸ್ತೆ ಬದಿಯ ಡೆಬ್ರಿಸ್‌ಗಳನ್ನು ತೆರೆವುಗೊಳಿಸಲು ಮತ್ತು ಮೋರಿಗಳ ಸ್ವಚ್ಚತೆಯ ಹಾಗೂ ಇನ್ನೂ ಇತರೆ ವಿಷಯಗಳ ಕುಂದು ಕೊರತೆಗಳನ್ನು ಹಾಲಿಸಿರುತ್ತಾರೆ. ಸದರಿ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳವ ಬಗ್ಗೆ ಸಂಬಂದಪಟ್ಟ ಅಧಿಕಾರಿ ಹಾಗೂ ನೌಕರರುಗಳಿಗೆ ಈ ಕೆಳಕಂಡಂತೆ ತಿಳಿಸಲಾಗಿರುತ್ತದೆ.

➢ **ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯ ರಸ್ತೆ ಬದಿಯ ಡೆಬ್ರಿಸ್‌ಗಳನ್ನು ತೆರೆವುಗೊಳಿಸಲು ವಾರ್ಡ್ ಇಂಜಿನಿಯರ್‌ರವರಿಗೆ ಕೂಡಲೇ ತೆರೆವುಗೊಳಿಸಲು ತಿಳಿಸಿದೆ.

- ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡಿರುವ ರಸ್ತೆಗಳನ್ನು ಕೂಡಲೆ ತೇರೆವುಗೋಳಿಸಲು ವಾರ್ಡ್ ಇಂಜಿನಿಯರ್‌ರವರಿಗೆ ಸೂಚಿಸಿದರು.

**ಕ್ರಮ : ಸಹಾಯಕ ಅಭಿಯಂತರರು ಈ ಮೇಲೆ ಸೂಚಿಸಿರುವತಂಹ ಎಲ್ಲಾ ಸಮಸ್ಯೆಗಳಿಗೆ ಕೂಡಲೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.**

➢ **<u>ಘನತ್ಯಾಜ್ಯ ಇಲಾಖೆಗೆ ಸಂಬಂದಿಸಿರುವುದು</u>**

- ವಾರ್ಡ್ ವ್ಯಾಪ್ತಿಯಲ್ಲಿನ ಎಮ್.ಎಮ್ ಲೇಔಟ್ Iನೇ ಮುಖ್ಯ ರಸ್ತೆಯಲ್ಲಿ ಹೋಸದಾಗಿ ಬ್ಲಾಕ್ ಸ್ಪಾಟ್ ಸೃಷ್ಟಿಯಾಗದಂತೆ ತ್ವರಿತವಾಗಿ ಕ್ರಮ ಕೈಗೋಳ್ಳಲು ಅಧಿಕಾರಿ ಹಾಗು ಸಿಬ್ಬಂದಿ ವರ್ಗದವರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ದೈನಂದಿನ ಕಸ ಸಂಸ್ಕರಣೆ ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ, ಸಂಸ್ಕರಣೆ ಬಗ್ಗೆ ಜನರಲ್ಲಿ ಜಾಗೃತಿಯನ್ನು ಉಂಟುಮಾಡಬೇಕೆಂದು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಆಟೋಗಳಿಗೆ ಜಿ.ಪಿ.ಎಸ್ ಮತ್ತು ಮೈಕ್‌ಗಳನ್ನು ಅಳವಡಿಸುವುದನ್ನು ಕಟ್ಟನಿಟ್ಟಾಗಿ ನಿರ್ವಹಿಸಬೇಕಾಗಿ ಅಧಿಕಾರಿಗಳಿಗೆ ತಿಳಿಸಿದರು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) ಹಾಗೂ ಕಿರಿಯ ಆರೋಗ್ಯ ಪರೀವಿಕ್ಷಕರು ಮತ್ತು ಈ ಮೇಲೆ ಸೂಚಿಸಿರುವ ಎಲ್ಲಾ ಸಮಸ್ಯೆಗಳಿಗೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.**

➢ **<u>ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿರುವುದು</u>**

- ವಾರ್ಡ್ ವ್ಯಾಪ್ತಿಯಲ್ಲಿನ ನೀರಿನ ಸಮಸ್ಯೆಗಳನ್ನು ಕೂಡಲೆ ಪರಿಹರಿಸಬೇಕಾಗಿ ಅಧಿಕಾರಿ ವರ್ಗದವರಿಗೆ ಸೂಚಿಸಿದೆ.

**ಕ್ರಮ : ಕಾಮಗಾರಿ ನಿರೀಕ್ಷಕರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಸಮಸ್ಯೆಗೆ ಕೂಡಲೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.**

➢ **<u>ಬೆಸ್ಕಾಂ ಇಲಾಖೆಗೆ ಸಂಬಂದಿಸಿರುವುದು</u>**

- ವಾರ್ಡ್ ವ್ಯಾಪ್ತಿಯಲ್ಲಿನ ಕೆಲಸ ನಿರ್ವಹಿಸದ ಸ್ಟ್ರಿಟ್ ಲೈಟ್‌ಗಳನ್ನೂ ಕೂಡಲೆ ಸರಿಪಡಿಸಬೇಕೆಂದು ಕಿರಿಯ ಅಭಿಯಂತರರಿಗೆ ಸೂಚಿಸಿದೆ.

**ಕ್ರಮ : ಸಹಾಯಕ ಅಭಿಯಂತರರು (ಬೆಸ್ಕಾಂ) ರವರು ಕೆಲಸ ನಿರ್ವಹಿಸದ ಸ್ಟ್ರಿಟ್ ಲೈಟ್ ಗಳನ್ನು ಶಿಘ್ರದಲ್ಲೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.**

➢ **ಪೊಲೀಸ್ ಇಲಾಖೆಗೆ ಸಂಬಂಧಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿನ ಎಮ್.ಎಮ್. ಲೇಔಟ್ 1ನೇ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ಆಟೋ ಸ್ಟಾಂಡಾಗಿ ಪರಿವರ್ತನೆಯಾಗುವುದನ್ನು ನಿಲ್ಲಿಸಲು ಕೂಡಲೆ ಕ್ರಮ ಕೈಗೊಳ್ಳಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ರಾಘವೇಂದ್ರ ಸ್ವಾಮಿ ಟೆಂಪಲ್ ರಸ್ತೆಯ ಬೇಕರಿಯಲ್ಲಿ ಗುಂಪು ಗುಂಪಾಗಿ ಜನ, ಕುಡುಕರು ಸೇರುವುದನ್ನು ಕಂಡುಬಂದಿದ್ದು ಕೂಡಲೆ ಕ್ರಮ ಕೈಗೊಳ್ಳಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಕೆಲವು ಜಾಗಗಳಲ್ಲಿ ಗಾಂಜಾ ಹಾಗೂ ಮದ್ಯ ಕುಡಿಯುವುದು ಕಂಡುಬಂದಿದ್ದು ಕೂಡಲೆ ಕ್ರಮ ಕೈಗೊಳ್ಳಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪೊಲೀಸ್ ಬೀಟ್ ಹಾಕುವುದನ್ನು ಹೆಚ್ಚಿಸಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.

**ಕ್ರಮ : ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ರವರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಕೂಡಲೆ ಕ್ರಮ ವಹಿಸುತ್ತೇನೆ ಎಂದು ಪ್ರತಿಕ್ರಿಯೆ ನೀಡಿದರು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

12/10/21

**ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ**
**ವಾರ್ಡ್-32**

**ಪ್ರತಿಗಳನ್ನು:**

- ಮಾನ್ಯ ಆಡಳಿತಾಧಿಕಾರಿರವರ ಅಪ್ತ ಶಾಖೆಗೆ ಸಲ್ಲಿಸಿ ಆಡಳಿತಾಧಿಕಾರಿರವರ ಗಮನಕ್ಕೆ ತರಲು ಕೋರಿದೆ.
- ಮಾನ್ಯ ವಲಯ ಆಯುಕ್ತರುರವರ ಅಪ್ತಶಾಖೆಗೆ ಸಲ್ಲಿಸಿ ಆಯುಕ್ತರವರ ಗಮನಕ್ಕೆ ತರಲು ಕೋರಿದೆ.
- ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಅಪ್ತಶಾಖೆಗೆ ಸಲ್ಲಿಸಿ ಅಯುಕ್ತರವರ ಗಮನಕ್ಕೆ ತರಲು ಕೋರಿದೆ.
- ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಹಿರಿಯ ವೈಧ್ಯಾಧಿಕಾರಿಗಳು ರವರ ಮಾಹಿತಿಗಾಗಿ ಸಲ್ಲಿಸಿದೆ
- ಪೊಲೀಸ್ ಇನ್ಸ್‌ಪೆಕ್ಟರ್ ಡಿ.ಜೆ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಛೇರಿ ಪ್ರತಿ.